1 ನೇ ಹೆಚ್ಚುವರಿ ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ, ಶಿರಸಿ.

ಸಿಸಿ.ನಂಬರ :1191/2020

ಸಿ.ಡಬ್ಲ್ಯೂ ಃ 3 ಪಿ.ಡಬ್ಲ್ಯೂ:2

ಸತ್ಯಪ್ರತಿಜ್ಞೆಯ ಮೇರೆಗೆ : ದಿನಾಂಕ 29-11-2022

| | | |
|---|---|---|
| ಸಾಕ್ಷಿದಾರನ ಹೆಸರು | : | ಶಿವಾನಂದ ಹನುಮಂತಪ್ಪ ದೇಶಳ್ಳಿ |
| ತಂದೆಯ ಹೆಸರು | : | ಹನುಮಂತಪ್ಪ ದೇಶಳ್ಳಿ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಗುತ್ತಿಗೆದಾರ |
| ವಾಸ್ತವ್ಯ | : | ಗಣೇಶನಗರ, ಶಿರಸಿ |

ಮುಖ್ಯ ವಿಚಾರಣೆ : ಎ.ಪಿ.ಪಿ.ಯವರಿಂದ :

ಚಾ.ಸಾ-1 ರವರನ್ನು ಈ ಹಿಂದೆ ನೋಡಿರುತ್ತೇನೆ . ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಈ ಹಿಂದೆ ನೋಡಿರುತ್ತೇನೆ . ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಅವು ಪಂಚನಾಮೆ ಹಾಗೂ ಕಚ್ಚಾನಕಾಶೆಯಾಗಿದ್ದು ಅದರ ಮೇಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ-1 ಮತ್ತು 2 ಎಂದು ಗುರುತಿಸಲಾಗಿದೆ . ಅದರ ಮೇಲಿರುವ ಸಹಿಗಳನ್ನು 1 ಬಿ ಮತ್ತು 2 ಬಿ ಎಂದು ಗುರುತಿಸಲಾಯಿತು . ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ತಾನು ಇರುವುದಾಗಿ ನುಡಿದಿದ್ದು ಅದನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿದೆ . ನಿ.ಪಿ-1 ಮತ್ತು 2 ರಲ್ಲಿ ಬರೆದಿರುವ ವಿಷಯಗಳು ಗೊತ್ತಿಲ್ಲ. ನಾನು ಪೋಲಿಸ ಠಾಣೆಗೆ ವೈಯುಕ್ತಿಕ ಕೆಲಸಕ್ಕೆ ಹೋದಾಗ ಪೋಲಿಸರ ಕೋರಿಕೆಯ ಮೇರೆಗೆ ಮಾಡಿರುತ್ತೇನೆ . ಅದನ್ನು ಯಾವಾಗ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಜಪ್ತಿಪಡಿಸಿಕೊಂಡ ಒಂಟಿ ನಳಿಕೆಯ ನಾಡಬಂದೂಕು ತೋರಿಸಲಾಗಿ ಅದನ್ನು ಈ ಮೊದಲು ನೋಡಿಲ್ಲ .

***(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದಾರೆಂದು ಮಾನ್ಯ ಸ ..ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು.)***

ದಿನಾಂಕ 29-08-2019 ರಂದು ರಾತ್ರಿ 8.30 ಗಂಟೆಗೆ ಪೋಲಿಸರು ನಿಮಗೆ ಪಂಚರಾಗಿ ಬರಮಾಡಲು ನೋಟಿಸ ನೀಡಿದರು ಎಂದರೆ ಸರಿಯಲ್ಲ . ಪೋಲಿಸರು ನೀಡಿದ ನೋಟಿಸಿ ನ ಮೇರೆಗೆ ಶಿರಸಿಯಲ್ಲಿರುವ ಸಲಾಮತ ನಗರದಲ್ಲಿರುವ ಆರೋಪಿತನ ಮನೆಯಲ್ಲಿ ಅಕ್ರಮವಾಗಿ ಬಂದುಾಕನ್ನು ಇಟ್ಟುಕೊಂಡ ಬಗ್ಗೆ ಮಾಹಿತಿ ನೀಡಿದರು ಎಂದರೆ ಸರಿಯಲ್ಲ . ಆ ವಿಷಯಕ್ಕೆ ಸಂಬಂಧಿಸಿದಂತೆ ಶೋಧನಾ ವಾರಂಟನ್ನು ಪಡೆದುಕೊಂಡವಿಷಯ ತಿಳಿಸಿದರು ಎಂದರೆ ಸರಿಯಲ್ಲ . ನಿಮ್ಮನ್ನು ಮತ್ತು ಚಾ .ಸಾ-2 ರವರನ್ನು ಕರೆದುಕೊಂಡು ಹೋಗಿ ಆರೋಪಿತನ ಮನೆಯ ಹಿಂದಿನ ಕೋನೆಯಲ್ಲಿ ಕಬ್ಬಿಣದ ಕಪಾಟಿನ ಹಿಂದಿನ ಒಂದು ಬಂದೂಕನ್ನು ಚಾ.ಸಾ-1 ರವರ ಸಮಕ್ಷಮ ಜಪ್ತಿಪಡಿಕೊಂಡರು ಎಂದರೆ ಸರಿಯಲ್ಲ . ಅದೇ ದಿನ ಘಟನೆಗೆ ಸಂಬಂಧಿಸಿಂತೆ ನಿಮ್ಮ ಮತ್ತು ಚಾ .ಸಾ-2 ರವರು ಸಮಕ್ಷಮ ಬಂದೂಕನ್ನು ಜಪ್ತುಪಡಿಸಿಕೊಂಡು ಪಂಚನಾಮೆ ಜರುಗಿಸಿದರು ಎಂದರೆ ಸರಿಯಲ್ಲ . ಅದೇ ಸಂದರ್ಭದಲ್ಲಿ ಘಟನಾ ಸ್ಥಳ ಕಚ್ಚಾನಕಾಶೆಯನ್ನು ಮತುತ ಭಾವಚಿತ್ರ ತೆಗೆದರು ಎಂದರೆ ಸರಿಯಲ್ಲ , ಅದೇ ದಿನ ನಿಮ್ಮ ಮತ್ತು ಚಾ .ಸಾ-2 ರವರು ಸಮಕ್ಷಮ ಚಾ .ಸಾ-1 ರವರು ಒಂಟಿನಳಿಕೆಯ ನಾಡಬಂದೂಕನ್ನು ಜಪ್ತಿಪಡಿಸಿಕೊಂಡರು ಎಂದರೆ ಸರಿಯಲ್ಲ . ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಈಗ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಲಾಯಿತು.)

ಓ.ಹೆ.ಕೆ.ಸರಿ ಇದೆ.

1 ನೇ ಹೆಚ್ಚುವರಿ ಜೆ.ಎಂ.ಎಫ್.ಸಿ., ಶಿರಸಿ.